**ಓ.ಎಸ್. ನಂಃ 226/2024**

**ಪಿ.ಡಬ್ಲ್ಯೂಃ 1**

**ದಿನಾಂಕ 26.02.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಕೆ.ಎನ್. ವಕೀಲರಿಂದಃ**

1. 1 ಮತ್ತು 2 ನೇ ಪ್ರತಿವಾದಿಯರು ನನ್ನ ಚಿಕ್ಕಪ್ಪಂದಿರು ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಚಿಕ್ಕಮ್ಮ ಎಂದರೆ ಸರಿ. 2001 ರಿಂದ ಈ ದಾವೆಯಲ್ಲಿ ತಡೆಯಾಜ್ಞೆ ಪಡೆಯುವವರೆಗೂ ಪ್ರತಿವಾದಿಯರೆ ದಾವಾ ಆಸ್ತಿಗಳ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ವಾದಿಯು 1 ನೇ ಪ್ರತಿವಾದಿಗೆ ಜಿ.ಪಿ.ಎ ಬರೆದುಕೊಡುವ ಕಾಲಕ್ಕೆ 1 ನೇ ಪ್ರತಿವಾದಿಗೆ ಸೇರಿದ 6 ಗುಂಟೆ ಜಮೀನನ್ನು ಪಾಲಾಕ್ಷ ಬಿನ್ ಕುಂಟೇಗೌಡರಿಂದ ವಾಪಸ್ಸು 1 ನೇ ಪ್ರತಿವಾದಿಗೆ ಬಿಡಿಸಿಕೊಡಬೇಕು ಎಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ವಾದಿಯ ವಿದ್ಯಾಭ್ಯಾಸಕ್ಕೆ ಆದ ಖರ್ಚು ಹಾಗೂ ವಾದಿಯನ್ನು ವಿದೇಶಕ್ಕೆ ಕಳುಹಿಸಲು ಆದ ಖರ್ಚು ಒಟ್ಟು 9 ಲಕ್ಷ ರೂಪಾಯಿಯನ್ನು ವಾದಿಯು 1 ನೇ ಪ್ರತಿವಾದಿಗೆ ಕೊಡಬೇಕಾಗಿ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ವಿದೇಶದಲ್ಲಿದ್ದ ಕಾರಣ ವಾದಿಯು 1 ನೇ ಪ್ರತಿವಾದಿಗೆ ಕೊಡಬೇಕಾಗಿದ್ದ ಸದರಿ 9 ಲಕ್ಷ ರೂಪಾಯಿ ಹಣವನ್ನು ನನ್ನ ಮುಖಾಂತರ ವಾದಿಯು 1 ನೇ ಪ್ರತಿವಾದಿಗೆ ಪಾವತಿಸಬೇಕಾಗಿ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ.

2. ವಾದಿಯ ಜಿ.ಪಿ.ಎ ದಾರನಾಗಿ ನಾನು ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದಾಗ ವಾದಿಯು ತಮಗೆ ಕೊಡಬೇಕಾಗಿದ್ದ 9 ಲಕ್ಷ ರೂಪಾಯಿ ಹಣವನ್ನು ತಮಗೆ ವಾಪಸ್ಸು ಕೊಡುವಂತೆ ಪ್ರತಿವಾದಿಯರು ನನ್ನಲ್ಲಿ ಹಲವಾರು ಬಾರಿ ಬಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪಕ್ಕದಲ್ಲಿಯೇ ನಾನು ವಾಸ ಮಾಡುತ್ತಿದ್ದೇನೆ ಎಂದರೆ ಸರಿ.

3. 1 ನೇ ಪ್ರತಿವಾದಿಗೆ ಸೇರಿದ 20X50 ಅಡಿ ಖಾಲಿ ಜಾಗವನ್ನು ನಾನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ಅಧಿಕಾರಿಗಳೊಂದಿಗೆ ಶಾಮಿಲಾಗಿ ವಾದಿಯು ಸುಳ್ಳು ಸರ್ವೇ ನಕಾಶೆಯನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ತಮಗೆ ಕೊಡಬೇಕಾಗಿರುವ 9 ಲಕ್ಷ ರೂಪಾಯಿ ಹಣವನ್ನು ತಮಗೆ ವಾಪಸ್ಸು ಕೊಡುವಂತೆ ಹಾಗೂ ಪಾಲಾಕ್ಷರವರಿಂದ 6 ಗುಂಟೆ ಜಮೀನನ್ನು

ಬಿಡಿಸಿಕೊಡುವಂತೆ ಬೇಡಿಕೆ ಇಟ್ಟು ಪ್ರತಿವಾದಿಯರು ದಾವಾ ಆಸ್ತಿಗೆ ಬಂದು ನಮಗೆ ಉಳುಮೆ ಮಾಡಲು ತೊಂದರೆ ಕೊಡುತ್ತಿದ್ದಾರೆ ಎಂದರೆ ಸಾಕ್ಷಿಯು ನಾವು ದಾವಾ ಆಸ್ತಿಯನ್ನು ಉಳುಮೆ ಮಾಡಲು ಪ್ರತಿವಾದಿಯರು ತೊಂದರೆ ಕೊಡುತ್ತಿರುವುದು ನಿಜ ಎಂದು ನುಡಿದಿರುತ್ತಾರೆ. ಕೇವಲ 9 ಲಕ್ಷದ ರೂಪಾಯಿ ಹಣದ ವಿಚಾರವಾಗಿ ಮತ್ತು ಪಾಲಾಕ್ಷರವರಿಂದ ಜಮೀನು ತೆಗೆಸಿಕೊಡುವ ವಿಚಾರವಾಗಿ ಮಾತ್ರ ಪ್ರತಿವಾದಿಯರು ದಾವಾ ಆಸ್ತಿಗೆ ಬಂದು ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿಯರು ದಾವಾ ಆಸ್ತಿಗೆ ತೊಂದರೆ ಕೊಡುತ್ತಿರುವುದು ನಿಜ ಎಂದು ನುಡಿದಿರುತ್ತಾರೆ. ತಮ್ಮ 9 ಲಕ್ಷ ರೂಪಾಯಿ ಹಣವನ್ನು ಪಡೆಯುವವರೆಗೂ ಹಾಗೂ ಪಾಲಾಕ್ಷರವರಿಂದ ಜಮೀನು ಪಡೆಯುವವರೆಗೂ ದಾವಾ ಆಸ್ತಿಗೆ ಬಂದು ತೊಂದರೆ ಕೊಡಲು ಪ್ರತಿವಾದಿಯರಿಗೆ ನೈತಿಕ ಹಕ್ಕು ಇದೆ ಎಂದರೆ ಸರಿಯಲ್ಲ.

4. ಪ್ರತಿವಾದಿಯರ ಪರ ವಾದಿಗೆ ಇರುವ ಕರ್ತವ್ಯವನ್ನು ನಿಭಾಯಿಸಬೇಕು ಎಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ವಾದಿಯು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಹೊರ ಬರುತ್ತದೆ ಎಂದರೆ ಸಾಕ್ಷಿಯು ತಮ್ಮ ಪರ ಸಾಕ್ಷಿ ನುಡಿಯಲು ವಾದಿ ನನಗೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಮತ್ತು ವಾದಿ ಶಾಮಿಲಾಗಿ ಪ್ರತಿವಾದಿಯರಿಗೆ ಮೋಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**